## ನಿವೇದನೆ

# ಶುದ್ಧಗಾಳಿಗೆ ಕೊಸರಾಟ ಬೇಡ ಮಾಲಿನ್ಯ ತಡೆ ಪ್ರಯತ್ನ ಫಲಿಸಲಿ

**ಪರಿಶುದ್ಧ ಗಾಳಿ ಈ ದೇಶದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು. ವಾಯುಮಾಲಿನ್ಯ ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾದರೆ ಜನರ ಬದುಕುವ ಮೂಲಭೂತ ಹಕ್ಕನ್ನು ನಿರಾಕರಿಸಿದಂತೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಳೆದ ವರ್ಷ ಸರ್ಕಾರದ ಕಿವಿಹಿಂಡಿತ್ತು.**




ವಾಯುಮಾಲಿನ್ಯಕ್ಕೆ ಸಂಬಂಧಿಸಿದ ಅಧ್ಯಯನ, ವರದಿಗಳು ಗಾಬರಿ ಮೂಡಿಸುವಂತಿವೆ. ಈ ಮಾಲಿನ್ಯಕ್ಕೆ ಕಾರಣ ಏನೇ ಆಗಿರಲಿ, ಯಾರೇ ಆಗಿರಲಿ ಪರಿಣಾಮಗಳನ್ನು ಮಾತ್ರ ಎಲ್ಲರೂ ಎದುರಿಸಬೇಕಾಗಿದೆ. ಹಾಗಾಗಿ ಪ್ರತಿಯೊಬ್ಬರೂ ಗಾಬರಿಗೆ ಒಳಗಾಗುವುದು ಸಹಜ. ಆತಂಕಕ್ಕೆ ಕಾರಣವಾಗುವಂತಹ ಇಂಥದೇ ವರದಿಯೊಂದರ ಮುಖ್ಯಾಂಶಗಳು ಕಳೆದ ವಾರ ಸುದ್ದಿಮಾಧ್ಯಮಗಳಲ್ಲಿ ಪ್ರಕಟವಾಗಿದ್ದವು. ಆ ವರದಿ ಪ್ರಕಾರ, ವಾಯುಮಾಲಿನ್ಯದಿಂದಾಗಿ ನಮ್ಮ ದೇಶದ ಶೇಕಡ 40ರಷ್ಟು ಜನರ ಜೀವಿತಾವಧಿಯು ಒಂಬತ್ತು ವರ್ಷ ಕಡಿಮೆಯಾಗಲಿದೆ!

ರಾಜಧಾನಿ ದೆಹಲಿ ಒಳಗೊಂಡಂತೆ ದೇಶದ ಉತ್ತರ, ಪೂರ್ವ ಮತ್ತು ಮಧ್ಯಭಾಗವು ಅತಿಹೆಚ್ಚು ವಾಯುಮಾಲಿನ್ಯದಿಂದ ಕೂಡಿದೆ. ಈ ಪ್ರದೇಶದಲ್ಲಿ 48 ಕೋಟಿಗೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ಮಾಲಿನ್ಯ ಹೀಗೇ ಇದ್ದರೆ, ಈ ಪ್ರದೇಶದಲ್ಲಿ ವಾಸಿಸುವ ಜನರ ಆಯುಷ್ಯದ ಅವಧಿ ಒಂಬತ್ತು ವರ್ಷಗಳಷ್ಟು ಕಡಿಮೆ ಆಗಲಿದೆ ಎಂದು ಅಮೆರಿಕದ ಷಿಕಾಗೊ ವಿಶ್ವವಿದ್ಯಾಲಯದ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್ (ಇಪಿಐಸಿ) ನಡೆಸಿರುವ ಅಧ್ಯಯನ ವರದಿ ಅಂದಾಜಿಸಿದೆ. ಭಾರತದ ಉಳಿದ ಕಡೆಗಳಲ್ಲೂ ವಾಯುಮಾಲಿನ್ಯದ ಪ್ರಮಾಣ ಹೆಚ್ಚಿಗೆ ಇದೆ ಎಂಬ ಕಳವಳಕಾರಿ ಅಂಶವನ್ನು ಈ ವರದಿ ಬಹಿರಂಗಪಡಿಸಿದೆ.

ನಮ್ಮ ಮಹಾನಗರಗಳಲ್ಲಿ ಗಾಳಿಯ ಗುಣಮಟ್ಟ ಕುಸಿದಿರುವುದನ್ನು ಅರಿಯಲು ಅಧ್ಯಯನ ವರದಿಗಳ ಆಧಾರಗಳೇನೂ ಬೇಕಾಗಿಲ್ಲ. ಈ ನಗರಗಳಲ್ಲಿ ವಾಸಿಸುವ ಪ್ರತಿಯೊಬ್ಬರ ಅನುಭವಕ್ಕೂ ಅದು ಬಂದಿರುವಂತಹುದು. ಆದರೆ, ಅನುಭವಿಸುವುದರ ಹೊರತಾಗಿ ಬೇರೆ ಆಯ್ಕೆಗಳಿಲ್ಲದ ಅಸಹಾಯಕತೆಗೆ ಬಹುಪಾಲು ಮಂದಿ ಒಳಗಾಗಿದ್ದಾರೆ. ಮಾಲಿನ್ಯ ತಡೆಯಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಲಿನ್ಯ ನಿಯಂತ್ರಣ ಮಂಡಳಿಗಳ ಉಸ್ತುವಾರಿಯಲ್ಲಿ ಹಲವು ಉಪಕ್ರಮಗಳನ್ನು ಕೈಗೊಂಡಿವೆಯಾದರೂ ನಿರೀಕ್ಷಿತ ಫಲಿತಾಂಶ ದೊರೆತಿಲ್ಲ ಎಂಬುದು ದುರದೃಷ್ಟದ ಸಂಗತಿ.

ದೆಹಲಿಯಂತೂ ವಾಯುಮಾಲಿನ್ಯಕ್ಕೆ ಕುಖ್ಯಾತಿ ಹೊಂದಿದೆ. ದೇಶದ ರಾಜಧಾನಿಯಲ್ಲಿ ಗಾಳಿಯ ಶುದ್ಧತೆ ಕಾಪಾಡಲು ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಹಲವು ಖಡಕ್ ಆದೇಶಗಳನ್ನು ನೀಡಿದೆ. ನಗರದಲ್ಲಿ ಡೀಸೆಲ್ ಬಳಸಿ ಸಂಚರಿಸುವ ಎಲ್ಲ ಬಸ್ಸು ಹಾಗೂ ತ್ರಿಚಕ್ರ ವಾಹನಗಳು ಸಿಎನ್‌ಜಿ ಬಳಸಬೇಕೆಂದು ತಾಕೀತು ಮಾಡಿತ್ತು. ಡೀಸೆಲ್‌ನಿಂದ ಸಿಎನ್‌ಜಿಗೆ ಪರಿವರ್ತನೆ ಹೊಂದಲು ಸಮಯ ನೀಡಿತು. ಅಂತಿಮವಾಗಿ ಡೀಸೆಲ್ ವಾಹನಗಳ ಬಳಕೆಗೆ ಅಲ್ಲಿ ಸಂಪೂರ್ಣವಾಗಿ ನಿಷೇಧ ಹೇರಲಾಗಿದೆ. ದೆಹಲಿ ಸರ್ಕಾರ ಮತ್ತೂ ಒಂದು ಹೆಜ್ಜೆ ಮುಂದಿಟ್ಟು ಕಾರುಗಳ ಬಳಕೆಯ ವಿಷಯದಲ್ಲಿ ಸರಿ ಬೆಸ ಸಂಖ್ಯೆಯ ನಿಯಮವನ್ನೂ ಪ್ರಯೋಗಾತ್ಮಕವಾಗಿ ಜಾರಿಗೊಳಿಸಿತ್ತು. ಪಂಜಾಬ್, ಹರಿಯಾಣದ ರೈತರು ಭತ್ತದ ಬೆಳೆಯ ಕೂಳೆಯನ್ನು ಸುಡುವ ಕಾರಣ ಒಂದು ಋತುವಿನಲ್ಲಿ ದೆಹಲಿಯ ವಾಯುಮಾಲಿನ್ಯ ವಿಪರೀತಕ್ಕೆ ಹೋಗುವುದೂ ಇದೆ.

ಪರಿಶುದ್ಧ ಗಾಳಿ ಈ ದೇಶದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು. ವಾಯುಮಾಲಿನ್ಯ ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾದರೆ ಜನರ ಬದುಕುವ ಮೂಲಭೂತ ಹಕ್ಕನ್ನು ನಿರಾಕರಿಸಿದಂತೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಳೆದ ವರ್ಷ ಸರ್ಕಾರದ ಕಿವಿಹಿಂಡಿತ್ತು. ಪರಿಸರ ರಕ್ಷಣೆಗೆ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ರೂಪಿಸಲಾಗಿರುವ ಸುಸ್ಥಿರ ಅಭಿವೃದ್ಧಿ ನೀತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯವನ್ನೂ ಅಧಿಕಾರಸ್ಥರಿಗೆ ನೆನಪಿಸಿತ್ತು.

ವಾಯುಮಾಲಿನ್ಯಕ್ಕೆ ಕಡಿವಾಣ ಹಾಕುವುದಕ್ಕಾಗಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಶುದ್ಧ ಗಾಳಿ ಯೋಜನೆಯನ್ನು (ಎನ್‌ಸಿಎಪಿ) ಜಾರಿಗೆ ತಂದಿದೆ. ಅತಿಹೆಚ್ಚು ವಾಯುಮಾಲಿನ್ಯವುಳ್ಳ ದೇಶದ 102 ನಗರಗಳಲ್ಲಿನ ವಾಯುಮಾಲಿನ್ಯವನ್ನು 2024ರ ವೇಳೆಗೆ ಶೇಕಡ 20ರಿಂದ 30ರಷ್ಟು ತಗ್ಗಿಸುವ ಗುರಿಯನ್ನು ಎನ್‌ಸಿಎಪಿ ಹೊಂದಿದೆ. ಈ ಯೋಜನೆ ಬಗ್ಗೆ ಇಪಿಐಸಿ ವರದಿಯಲ್ಲೂ ಉಲ್ಲೇಖವಿದೆ ಎಂದು ವರದಿಯಾಗಿದೆ. ಅಲ್ಲದೆ, ‘ಈ ಯೋಜನೆಯು ತನ್ನ ಗುರಿ ಮುಟ್ಟಿ, ಸ್ಥಿರತೆ ಸಾಧಿಸಿದಲ್ಲಿ ದೇಶದ ಒಟ್ಟಾರೆ ಜನರ ಜೀವಿತಾವಧಿಯನ್ನು 1.7 ವರ್ಷದಷ್ಟು ಮತ್ತು ದೆಹಲಿ ನಿವಾಸಿಗಳ ಜೀವಿತಾವಧಿಯನ್ನು 3.1 ವರ್ಷಗಳಷ್ಟು ಹೆಚ್ಚಿಸಬಹುದು’ ಎಂದೂ ಹೇಳಿರುವುದು ಭರವಸೆಯ ಬೆಳ್ಳಿರೇಖೆಯಂತೆ ಗೋಚರಿಸಬಹುದು.

ಈ ನಡುವೆ ಬದಲಿ ಇಂಧನಗಳ ಬಗ್ಗೆ, ಹೊಸ ತಂತ್ರಜ್ಞಾನ ಅಳವಡಿಕೆ ಕುರಿತು, ವಿದ್ಯುತ್ ಚಾಲಿತ ವಾಹನಗಳ ಬಗ್ಗೆ ಶಕ್ತ ರಾಷ್ಟ್ರಗಳ ಮಟ್ಟದಲ್ಲಿ ತುರುಸಿನ ಚರ್ಚೆ ಆರಂಭವಾಗಿದೆ. ‘2060ರ ಒಳಗೆ ನಾವು ಝೀರೊ ಕಾರ್ಬನ್ ದೇಶವಾಗಲಿದ್ದೇವೆ’ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಘೋಷಿಸಿದ್ದಾರೆ. ಈ ಚರ್ಚೆ, ಪ್ರಯತ್ನಗಳು ಫಲಿಸಿ ಶುದ್ಧಗಾಳಿ ಎಲ್ಲರಿಗೂ ಎಟುಕುವಂತಾಗುವುದೇ?

**■ ಎನ್. ಉದಯಕುಮಾರ್**